# ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ,
# ಚಾಮರಾಜನಗರ
## <u>ಸಿ.ಸಿಃ 1656/2022</u>

ಫ್ರಾಸಾ-1, ಚಾಸಾ-1

| | | |
|---|---|---|
| ಸಾಕ್ಷಿದಾರರ ಹೆಸರು | : | ಹನಮಂತ ಉಪ್ಪಾರ |
| ತಂದೆಯ ಹೆಸರು | : | ಲಕ್ಕಪ್ಪ |
| ವಯಸ್ಸು | : | 34ವರ್ಷ |
| ಉದ್ಯೋಗ | : | PSI |
| ವಾಸ | : | ಚಾಮರಾಜನಗರ |

ಸಾಕ್ಷಿಗೆ ದಿನಾಂಕಃ 01.12.2025ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ನಾನು ದಿಃ 29.10.2020 ರಿಂದ 03.01.2022ರವರೆಗೆ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ PSI ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ 04.03.2021 ರಂದು ಬೆಃ 9 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ತೆರಕಣಾಂಬಿ ಸಂತೆಯಿಂದ್ದ ಅರಕಲವಾಡಿ ಮಾರ್ಗವಾಗಿ ತಾಳವಾಡಿ ಕಸಾಯಿ ಖಾನೆಗೆ ಜಾನುವಾರುಗಳನ್ನು ಒಂದು ಗೂಡ್ಸ ವಾಹನದಲ್ಲಿ ತುಂಬಿಕೊಂಡು ಸಾಗಾಟ ಮಾಡುತ್ತಿರುವ ನನಗೆ ಮಾಹಿತಿ ಬಂದಿರುತ್ತದೆ. ಆಗ ನಾನು ಚಾಸಾ-4 ರಿಂದ 6 ರವರುಗಳಿಗೆ ಮಾಹಿತಿಯ ವಿಚಾರ ತಿಳಿಸಿ ಜೊತೆಯಲ್ಲಿ ಕರೆದುಕೊಂಡು ಇಲಾಖಾ ಜೀಪಿನ ನೊಂದಣಿ ಸಂಃ KA-10-G-487 ರಲ್ಲಿ ಹೊರಟಿರುತ್ತೇನೆ. ದಾರಿ ಮಧ್ಯೆದಲ್ಲಿ ಅರಕಲವಾಡಿ ಬಸ್ ನಿಲ್ದಾಣದ ಬಳಿ ಇದ್ದ ಚಾಸಾ-2 ಮತ್ತು 3ರವರನ್ನು ಕರೆದು ಕೇಸಿನ ವಿಚಾರವನ್ನು ತಿಳಿಸಿ, ಅವರುಗಳು ದಾಳಿ ಸಮಯದಲ್ಲಿ ಪಂಚರಾಗಲು ಒಪ್ಪಿದ ಮೇರೆಗೆ ಅವರನ್ನು ನಮ್ಮ ಜೊತೆ ಜೀಪಿನಲ್ಲಿ ಕರೆದುಕೊಂಡು ಅರಕಲವಾಡಿ -ಮೂಡಲಹೊಸಹಳ್ಳಿ ಮಧ್ಯೆ ಇರುವ ರೇಣುಕಾ ಬಾರ್ ಹತ್ತಿರ ಮರೆಯಾಗಿ ಜೀಪನ್ನು ನಿಲ್ಲಿಸಿ ಕಾಯುತ್ತಿದ್ದಾಗ ಬೆಃ 10 ಗಂಟೆ ಸಮಯದಲ್ಲಿ

ಅರಕಲವಾಡಿ ಕಡೆಯಿಂದ ಮೂಡಲಹೊಳಹಳ್ಳಿ ಕಡೆಗೆ ಒಂದು ಗೂಡ್ಸ ಟೆಂಪೂ ಬಂದಿತ್ತು, ಅದರಲ್ಲಿ ಜಾನುವಾರುಗಳನ್ನು ತುಂಬಲಾಗಿತ್ತು. ಆಗ ಸದರಿ ವಾಹನವನ್ನು ನಿಲ್ಲಿಸಿ ಪಂಚರ ಸಮಕ್ಷಮ ಚಾಲನೆ ಮಾಡುತ್ತಿದ್ದ ಆಸಾಮಿಯ ಹೆಸರನ್ನು ಕೇಳಲಾಗಿ ಆತನ್ನು ತನ್ನ ಹೆಸರು ಮತ್ತು ವಿಳಾಸವನ್ನು ತಿಳಿಸಿರುತ್ತಾನೆ. ಸದರಿ ವಾಹನದ ನಂಬರ ನೋಡಲಾಗಿ KA-10-A-3111 ಆಗಿತ್ತು. ನಂತರ ಜಾನುವಾರಗಳು ಬಗ್ಗೆ ವಿಚಾರಿಸಲಾಗಿ ಸದರಿ ಜಾನುವಾರುಗಳನ್ನುಸಾಗಾಟ ಮಾಡಲು ಯಾವುದೆ ಪರವಾನಿಗೆ ಆಗಲೀ ಮತ್ತು ಪಶುವೈದ್ಯಕೀಯ ಪ್ರಮಾಣಪತ್ರ ಇಲ್ಲದ ಕಾರಣ ಮತ್ತು ಸದರಿ ಜಾನುವಾರುಗಳನ್ನು ಸದರಿ ಆಸಾಮಿಯು ತೆರಕಣಾಂಬಿ ಸಂತೆಯಲ್ಲಿ ಖರೀದಿಸಿ, ತಮಿಳುನಾಡಿನ ತಾಳವಾಡಿಯ ಕಸಾಯಿ ಖಾನೆಗೆ ಮಾರಾಟ ಮಾಡಲು ತೆಗೆದುಕೊಂಡು ಹೋಗುವುದಾಗಿ ತಿಳಿಸಿದ್ದರಿಂದ ಪಂಚರ ಸಮಕ್ಷಮ ವಾಹನದಲ್ಲಿದ್ದ ಜಾನುವಾರುಗಳನ್ನು ಪರಿಶೀಲಿಸಲಾಯಿತು. ಒಟ್ಟು ಐದು ಜಾನುವಾರುಗಳು ಇದ್ದು, ಅವುಗಳ ಪೈಕಿ ಎರಡು ದೊಡ್ಡ ಹೋರಿ, ಮೂರು ,ಚಿಕ್ಕ ಹೋರಿಕರುಗಳು ಇದ್ದವು.

ಆಗ ನಾವು ಪಂಚರ ಸಮಕ್ಷಮ ಬೆಃ 10.15 ರಿಂದ 11.15 ರವರೆಗೆ ಮಹಜರ್ ಕ್ರಮಕಿ ಜರುಗಿಸಿ ಜಾನುವಾರುಗಳನ್ನು ಮತ್ತು ವಾಹನಗಳನ್ನು ಮತ್ತುಆಸಾಮಿ ಗಳನ್ನು ವಶಕ್ಕೆ ಪಡೆದುಕೊಂಡು ಬಂದು ಠಾಣಾಧಿಕಾರಿಗಳಿಗೆ ಮಃ 12.15ರ ಸಮಯದಲ್ಲಿ ಒಂದು ವರದಿಯನ್ನು ಅದರ ಜೊತೆ ವಶಪಡಿಸಿಕೊಂಡಿದ್ದ ವಾಹನ, ಜಾನುವಾರುಗಳು ಮತ್ತು ಆಸಾಮಿ ಹಾಗೂ ಸ್ಥಳದಲ್ಲಿದ್ದ ಮಾಡಲಾಗಿದ್ದ ಅಮಾನತ್ತು ಮಹಜರ್ ಗಳನ್ನು ಹಾಜರುಪಡಿಸಿರುತ್ತೇನೆ. ವರದಿಯನ್ನು ಈಗ ನಾನು ನೋಡುತ್ತಿದ್ದು ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸ್ಥಳ ಮಹಜರ್ ನೋಡುತ್ತಿದ್ದು, ಅದನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆಸಾಮಿಯೇ ಆ ದಿನ ವಾಹನದಲ್ಲಿ ಜಾನುವಾರುಗಳನ್ನು ಸಾಗಿಸುತ್ತಿದ್ದ ವ್ಯಕ್ತಿಯಾಗಿರುತ್ತಾರೆ. ಆ ದಿನ ಜಾನುವಾರುಗಳನ್ನು ಸಾಗಿಸುತ್ತಿದ್ದ ಗೂಡ್ಸ ವಾಹನವನ್ನು ನೋಡಿದರೇ ಗುರ್ತಿಸುತ್ತೇನೆ.

**ಪಾಟೀಸವಾಲುಃ 1ನೇ ಆರೋಪಿ ಪರವಾಗಿ ಶ್ರೀ ಜಿ.ಎಸ್.ಕೆ. ವಕೀಲರಿಂದಃ**

ದಿನಾಂಕಃ 04.03.2021 ರಂದು ಬೆಃ 9 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ತೆರಕಣಾಂಬಿ ಸಂತೆಯಿಂದ ಅರಕಲವಾಡಿ ಮಾರ್ಗವಾಗಿ ತಾಳವಾಡಿ ಕಸಾಯಿ ಖಾನೆಗೆ ಜಾನುವಾರುಗಳನ್ನು ಒಂದು ಗೂಡ್ಸ ವಾಹನದಲ್ಲಿ ತುಂಬಿಕೊಂಡು ಸಾಗಾಟ ಮಾಡುತ್ತಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಈ ಕೇಸಿನ ಸಂಬಂಧ ಯಾವುದೇ ಮಹಜರ್ ಸಾಕ್ಷಿಗಳನ್ನು ನನ್ನ ಜೊತೆ ಕರೆದುಕೊಂಡು ಹೋಗಿರುವುದಿಲ್ಲ, ಆ ಸಂಬಂಧ ಯವುದೇ ಮಹಜರ್ ನಾನು ಮಾಡಿರುದಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನವನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ಯಾವುದೇ ಫೋಟೋಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ಸದರಿ ಜಾನುವಾರುಗಳನ್ನು ಸದರಿ ಆಸಾಮಿಯು ತೆರಕಣಾಂಬಿ ಸಂತೆಯಲ್ಲಿ ಖರೀದಿಸಿದರ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಠಾಣಾ ಅಂಕಿ-ಅಂಶಗಳಿಗೋಸ್ಕರ ಸುಳ್ಳು ಫಿರ್ಯಾದನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಸದರಿ ಜಾನುವಾರುಗಳ ಗುರುತು ಮತ್ತು ವಯಸ್ಸಿನ ಬಗ್ಗೆ ಸದರಿ ಮಹಜರ್ ನಲ್ಲಿ ನಮೂದಿಸಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ಪಶು ವೈದ್ಯಾಧಿಕಾರಿಗಳು ನಮೂದಿಸಿರುತ್ತಾರೆ. ಸದರಿ ವಶಪಡಿಸಿಕೊಂಡ ವಾಹನದ ವಿಸ್ತೀರ್ಣದ ಬಗ್ಗೆ ಸದರಿ ಮಹಜರ್ ನಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸದರಿ ಸ್ವ-ವರದಿ ಮತ್ತು ಮಹಜರ್ ನ್ನು ಪೊಲೀಸ್ ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಂಚರಿಗೆ ನೋಟಿಸ್ ಕೊಟ್ಟಿಲ್ಲ, ಮೌಖಿಕವಾಗಿ ತಿಳಿಸಿರುತ್ತೇನೆ. ರೇಣುಕಾರ ಬಾರ್ ಹತ್ತಿರ ನಿಂತಿದ್ದಾಗ ಬೇರೆ ವಾಹನಗಳನ್ನು ತಪಾಸಣೆ ಮಾಡಿಲ್ಲ ಎಂದರೆ ಸರಿ. ಸದರಿ ಸ್ಥಳವು ತಾಳವಾಡಿಗೆ ಹೋಗುವ ದಾರಿ ಎಂದರೆ ಸರಿ. ವಾಹನ ದಟ್ಟನೆ ಜಾಸ್ತಿ ಇರುವುದಿಲ್ಲ. ಸದರಿ ಸ್ಥಳದ ಹತ್ತಿರ ಅಕ್ಕಪಕ್ಕದ ಜಮೀನುಗಳಿವೆ ಎಂದರೆ ಸರಿ. ರೇಣುಕಾ ಬಾರ್ ನಲ್ಲಿ ಸಿ.ಸಿ ಕ್ಯಾಮೇರಾದ ಬಗ್ಗೆ ನಾನು ಗಮನಿಸಿರುವುದಿಲ್ಲ. ಸದರಿ ಸ್ಥಳದಲ್ಲಿ ಬಾರ್ ಇರುವುದರಿಂದ ಜನ ದಟ್ಟನೆ ಇರುತ್ತದೆ ಎಂದರೆ ಸರಿ.

**ಪಾಟೀಸವಾಲುಃ 2ನೇ ಆರೋಪಿ ಪರವಾಗಿ ಶ್ರೀ ಎ.ಎಸ್.ಎಸ್.ಆರ್. ವಕೀಲರಿಂದಃ**

ತನಿಖೆಯನ್ನು ನಾನು ಮಾಡಿರುವುದಿಲ್ಲ. ಜಾನುವಾರುಗಳನ್ನು ತೆರಕಣಾಂಬಿ ಸಂತೇಯಿಂದ ತಂದಿದ್ದರ ಮಾಹಿತಿ ಇರುತ್ತದೆ. ನಾನು ಪ್ರಕರಣ ನೊಂದಾಯಿಸದ ಸಂದರ್ಭದಲ್ಲಿ 2ನೇ ಆರೋಪಿ ಬಗ್ಗೆ ನನಗೆ ತಿಳಿದು ಬಂದಿರುವುದಿಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.